ಕೈಯಿಟ್ಟು ಮೆತ್ತಗೆ ಸವರಿ, ಗುಂಡಗೆ ಅಲ್ಲಾಡಿಸಿದ. ‘ಸಾಕು ಮಾಡು, ನೀನು ತಿನ್ನುವ ಅಧ್ವಾನದ ಜಂಕ್ ತಿಂಡಿ–ತಿನಿಸುಗಳನ್ನು ಜೀರ್ಣಿಸಿಕೊಳ್ಳಲು ಆಗದೆ ಹೇಗೆ ಊದಿದ್ದೇನೆ ನೋಡು’ ಎಂದು ತನ್ನ ಗೋಳನ್ನ ಹೇಳಿತು. ‘ನೀನು ಸೇವಿಸುವ ಎಲ್ಲ ಸಕ್ಕರೆ ಪಾನೀಯಗಳನ್ನು ನಾನು ಕಷ್ಟ ಪಟ್ಟು ಕರಗಿಸಬೇಕು. ನೀನು ಇವೆಲ್ಲವನ್ನ ಬದಲಾಯಿಸಿಕೊಳ್ಳದಿದ್ರೆ, ಏನಾದ್ರೂ ಮಾಡ್ಕೋ ಹೋಗು ಅಂತ ನನ್ನ ಕೆಲಸ ನಿಲ್ಲಿಸುವೆ’ ಎಂದು ಮೇದೋಜೀರಕ ಗ್ರಂಥಿಯು ತನ್ನ ಪ್ರತಿಭಟನೆ ತೋರಿತು. ಕೊನೆಗೆ ಕೋಪದಿಂದ ಹೀಗೆ ಹೇಳಿತು ‘ನನ್ನ ತಾಳ್ಮೆಗೆ ಒಂದು ಮಿತಿಯಿದೆ’ ಎಂದು ಮೂತಿ ತಿರುಗಿಸಿತು. ಅರುಣ್‌ಗೆ ನಿಜಕ್ಕೂ ತನ್ನ ಬಗ್ಗೆ ಬೇಸರ ಅನಿಸಿತು. ‘ಓಹ್ ಓಹ್ ದಯವಿಟ್ಟು ಕ್ಷಮೆಯಿರಲಿ ನೀವು ನನ್ನ ಅಂಗಗಳು. ನೀವು ನನ್ನ ಮೇಲೆ ಕೋಪಿಸಿಕೊಂಡು ನಿಮ್ಮ ಕಾರ್ಯ ನಿಲ್ಲಿಸಿದರೆ ನಾನು ಉಳಿಯುವುದು ಹೇಗೆ?’ ನನ್ನಿಂದ ತಪ್ಪಾಗಿದೆ, ಮನ್ನಿಸಿ.

ಈಗ ತುಟಿ ಹೇಳಿತು ‘ಅರುಣಣ್ಣ ನೀನು ನಕ್ಕು ಅದೆಷ್ಟು ದಿನ ಆಯ್ತು ಗೊತ್ತಾ?’

‘ಓಹ್ ನೀನೂ ಇವತ್ತೆ ಬಂದೆಯಾ’ ಎಂದ ಅರುಣ್.

‘ಹೌದು. ನಿನಗೆ ತುಟಿಗಳಿರುವುದು ತಿನ್ನಲು–ಕುಡಿಯಲು ಮಾತ್ರವಲ್ಲ. ನಗು ನಗುತ್ತಾ ಇರಲು. ನೀನು ನಕ್ಕರೆ ನಿನ್ನ ಮುದುಳಿಗೆ ಅಕ್ಕರೆ ಎಂದಿತು ತುಟಿ.

‘ನಾನು ಕೆಲಸ ಮಾಡೋದು ಸೂರ್ಯಪ್ಪ, ಭೂಮಿಯಮ್ಮನ ಜೈವಿಕ ಗಡಿಯಾರಕ್ಕೆ (**Circadian Rhythm**) ತಕ್ಕಂತೆ’ ಅಂತು ಪ್ಯಾಂಕ್ರಿಯಾಸ್ (ಮೇದೋಜೀರಕ ಗ್ರಂಥಿ).

ಕೆನ್ನೆ ಮೇಲೆ ಮೂಡಿದ ಗಡಿಯಾರದ ಆಕಾರದ ಹೇಳಿತು ‘ನಾನು ಸಮಯ ತೋರಿಸುವುದು ಜೈವಿಕ ಗಡಿಯಾರದಂತೆ. ನೀನು ಅದಕ್ಕೆ ತಕ್ಕಂತೆ ದಿನಚರಿ ಹೊಂದಿಸಿಕೊಂಡು ಕೆಲಸ ಮಾಡಬೇಕು’. ಅವನು ಮತ್ತೆ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಂಡ. ಮುಖದಲ್ಲಿ ಮೂಡಿದ್ದ ಗಡಿಯಾರದ ಅಚ್ಚಿನ ಆಕಾರ ಕಣ್ಣು ಹೊಡೆಯಿತು.

‘ನಾನು ಅಷ್ಟೆ’ ಎಂದಿತು ಮೆದುಳು. ಅದು ಕಪೋಲದ ಒಳಗಿಂದಲೇ ತನ್ನ ಧ್ವನಿ ಹೊರಡಿಸಿತು.

ಈಗ ಎಲ್ಲವೂ ಸೇರಿ ‘ನಮಗೂ ಜೀವವಿದೆ. ನಾವಿದ್ದರೆ ನೀನು. ಮಾತನಾಡುತ್ತೇವೆ ನಾವು. ಕೇಳಿಸಿಕೊಳ್ಳಬೇಕು ನೀನು’ ಎಂದವು.

‘ಹೌದು. ನಿಮ್ಮ ಧ್ವನಿಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಸೋತಿದ್ದೆ. ಇದೊಂದು ಬಾರಿ ಕ್ಷಮಿಸಿ’ ಎಂದ ಅರುಣ್.

ಆ ದಿನದಿಂದ ಅರುಣ್ ಹೆಚ್ಚು ಕ್ರಿಯಾಶೀಲನಾಗಿದ್ದ. ಆರೋಗ್ಯಕರ–ಸತ್ವವಿರುವ ಆಹಾರವನ್ನು ಸೇವಿಸುತ್ತಿದ್ದ. ಜಂಕ್ ಆಹಾರವನ್ನ ಯಾರಾದ್ರೂ ತಿನ್ನಲು ಕೊಟ್ಟರೆ ನನಗಿದು ಬೇಡ ಎಂದು ನೇರವಾಗಿ ಹೇಳುತಿದ್ದ. ಬಾಲ್ ಹಿಡಿದು ಸಂಜೆ ಅಥವಾ ಬೆಳಿಗ್ಗೆ ತನ್ನ ಸ್ನೇಹಿತರೊಂದಿಗೆ ಆಟವಾಡಲು ಪ್ರಾರಂಭಿಸಿದ. ಲ್ಯಾಪ್‌ಟಾಪ್‌ಗೆ, ಮೊಬೈಲ್‌ಗೆ ಸಂಬಂಧಿಸಿದ ಕೆಲಸಗಳಾಗಿದ್ದರೆ ಅವನು ವಿರಾಮಗಳನ್ನು ತೆಗೆದುಕೊಳ್ಳುತ್ತಿದ್ದ.

ಒಂದು ವರ್ಷದ ನಂತರ ಅವನನ್ನು ನೋಡಿದ ಸ್ನೇಹಿತರು, ಸಂಬಂಧಿಕರು ‘ಅರೆ ಅರುಣ್! ಎಷ್ಟು ಆರೋಗ್ಯವಂತನಾಗಿ ಕಾಣುತ್ತಿಯಾ. ಏನು ಮ್ಯಾಜಿಕ್ ಮಾಡಿದೆ’ ಎಂದು ಅಚ್ಚರಿಯಿಂದ ಕೇಳುತ್ತಿದ್ದಾರೆ.

ಅದಕ್ಕೆ ಅರುಣ್ ‘ನನ್ನ ಅಂಗಗಳು ಮಾತನಾಡುತ್ತಿವೆ. ನಾನು ಅದನ್ನು ಆಲಿಸುವೆ ಅಷ್ಟೆ’ ಎಂದು ಉತ್ತರಿಸಿದ.





**ಚಾರ್ವಿ ಎನ್.ಎಚ್.**
2ನೇ ತರಗತಿ, ಚೈತನ್ಯ ಟೆಕ್ನೊ ಸ್ಕೂಲ್,
ದಾವಣಗೆರೆ



**ಆಶಿತಾ**
10ನೇ ತರಗತಿ, ಡೆಲ್ಲಿ ಪಬ್ಲಿಕ್ ಸ್ಕೂಲ್,
ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:**
editorsu@sudha.co.in

